# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 592
2. ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 11-07-2023
4. ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ನಗರದಲ್ಲಿ ನಗರೋತ್ಥಾನ ಯೋಜನೆಯಡಿಯಲ್ಲಿ ಎಷ್ಟು ಕಿ.ಮೀ ಉದ್ದದ ಯುಜಿಡಿ ಮತ್ತು 24/7 ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಹಾಗೂ ಕಾಮಗಾರಿಗಳು ಯಾವ ಹಂತದಲ್ಲಿದೆ; | ಬೀದರ್ ನಗರದಲ್ಲಿ ನಗರೋತ್ಥಾನ ಯೋಜನೆಯಡಿಯಲ್ಲಿ ಯಾವುದೇ ಯು.ಜಿ.ಡಿ ಮತ್ತು 24/7 ಕಾಮಗಾರಿಗಳು ಕೈಗೆತ್ತಿಕೊಂಡಿರುವುದಿಲ್ಲ. ಆದರೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ವತಿಯಿಂದ ಅಮೃತ್ ಯೋಜನೆಯಡಿ ಈ ಕೆಳಕಂಡ ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.<br><br>**1) ಬೀದರ್ ನಗರದ ವಲಯ-2 ರಲ್ಲಿ ಒಳಚರಂಡಿ ಯೋಜನೆ:**<br>ಸದರಿ ಯೋಜನೆಯಡಿ 132.98 ಕಿ.ಮೀ ಉದ್ದದ ಪೈಪ್‌ಲೈನ ಅಳವಡಿಸಿ, ಸುಮಾರು 5366 ಸಂಖ್ಯೆಯ ಆಳಗುಂಡಿಗಳು, 12167 ಸಂಖ್ಯೆಯ ಗೃಹ ಸಂಪರ್ಕ, 2 ಸಂಖ್ಯೆಯ ವೆಟವೆಲ್, ಸುಮಾರು 6200 ಮೀಟರ ಉದ್ದದ ಡಿ.ಐ. ಏರುಕೊಳವೆ ಮಾರ್ಗ ಅಳವಡಿಸಿ, 17.26 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡಲಾಗಿರುತ್ತದೆ. ಸದರಿ ಕಾಮಗಾರಿಯು ಡಿಸೆಂಬರ್ – 2019 ರಲ್ಲಿ ಮುಕ್ತಾಯಗೊಳಿಸಿ ನಗರ ಸಭೆ ಬೀದರ್ ರವರಿಗೆ ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸಲಾಗಿದೆ.<br><br>ಬೀದರ್ ನಗರದಲ್ಲಿ ಅಮೃತ್ ಯೋಜನೆಯಡಿ ಈ ಕೆಳಕಂಡ ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.<br><br>**2) ಬೀದರ್ ನಗರದ ವಲಯ-3 ರಲ್ಲಿ ಒಳಚರಂಡಿ ಯೋಜನೆ:-**<br>ಸದರಿ ಯೋಜನೆಯಡಿ 63.96 ಕಿ.ಮೀ ಉದ್ದದ ಪೈಪ್-ಲೈನ ಅಳವಡಿಸಿ, ಸುಮಾರು 2496 ಸಂಖ್ಯೆಯ ಆಳಗುಂಡಿಗಳು, 6060 ಸಂಖ್ಯೆಯ ಗೃಹ ಸಂಪರ್ಕ, 1 ಸಂಖ್ಯೆಯ ವೆಟ್‌ವೆಲ್, ಸುಮಾರು 70 ಮೀಟರ್ ಉದ್ದದ ಡಿ.ಐ. ಏರುಕೊಳವೆ ಮಾರ್ಗ ಅಳವಡಿಸಿ, 7.00 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡಲಾಗಿರುತ್ತದೆ. ಸದರಿ ಕಾಮಗಾರಿಯು ದಿನಾಂಕ:13.03.2023 ರಂದು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ.<br><br>**3) ಬೀದರ್ ನಗರದ ವಲಯ-1 ಮತ್ತು 3 ರಲ್ಲಿ ಬಿಟ್ಟು ಹೋದ ಪ್ರದೇಶದಲ್ಲಿ ಒಳಚರಂಡಿ ಯೋಜನೆ:-**<br>ಸದರಿ ಯೋಜನೆಯಡಿ 30.36 ಕಿ.ಮೀ ಉದ್ದದ ಪೈಪಲೈನ ಅಳವಡಿಸಿ, ಸುಮಾರು 1092 ಸಂಖ್ಯೆಯ ಆಳಗುಂಡಿಗಳು, 2300 ಸಂಖ್ಯೆಯ ಗೃಹ ಸಂಪರ್ಕ ಅಳವಡಿಸಲಾಗಿರುತ್ತದೆ.<br><br>ಸದರಿ ಕಾಮಗಾರಿಯಡಿಯಲ್ಲಿ 9.50 ಕಿ.ಮೀ. ರಸ್ತೆ ಮರು ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಬೇಕಾಗಿದ್ದು, ವೇರಿಯೇಷನ್ ಪ್ರಸ್ತಾವನೆಯು State High Power Steering Committee (SHPSC) ಯಲ್ಲಿ ಅನುಮೋದನೆಯಾಗಬೇಕಾಗಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | **ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ ವತಿಯಿಂದ:** ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (NKUSIP) ಯೋಜನೆಯಡಿ ಬೀದರ್ ನಗರದಲ್ಲಿ ಯುಜಿಡಿ ಕಾಮಗಾರಿಯನ್ನು ಪೂರ್ಣಗೊಳಿಸಿ ನಗರಸಭೆಗೆ ಮುಂದಿನ ನಿರ್ವಹಣೆಗೆ ಹಸ್ತಾಂತರಿಸಲಾಗಿದೆ. 24/7 ಕುಡಿಯುವ ನೀರು ಯೋಜನೆ ಹಮ್ಮಿಕೊಂಡು ಪೂರ್ಣಗೊಳಿಸಿ ನಿರ್ವಹಣೆಯನ್ನು ಕರಾರಿನ ನಿಯಮಾನುಸಾರ ಗುತ್ತಿಗೆದಾರರು ನಿರ್ವಹಿಸುತ್ತಿರುತ್ತಾರೆ. |
| ಆ) | ಸದರಿ ಕಾಮಗಾರಿಗಳ ನಿರ್ವಹಣೆಗಾಗಿ ಎಷ್ಟು ಸಿಸಿ ರಸ್ತೆಗಳನ್ನು ಅಗೆಯಲಾಗಿದೆ ಹಾಳಾಗಿರುವ ರಸ್ತೆಗಳನ್ನು ಯಾವ ಕಾಲ ಮಿತಿಯೊಳಗೆ ದುರಸ್ತಿ ಮಾಡಲಾಗುವುದು; | **ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ**<br><br>1) **ಬೀದರ್ ನಗರದ ವಲಯ-2 ರಲ್ಲಿ ಒಳಚರಂಡಿ ಯೋಜನೆ:** ಸದರಿ ಕಾಮಗಾರಿಯ ನಿರ್ವಹಣೆಗಾಗಿ 65.10 ಕಿ.ಮೀ ರಸ್ತೆಯನ್ನು ಅಗೆಯಲಾಗಿದ್ದು, ಅದರಲ್ಲಿ 46.17 ಕಿ.ಮೀ ರಸ್ತೆಯನ್ನು ಮಂಡಳಿ ವತಿಯಿಂದ ಹಾಗೂ ಉಳಿದ ರಸ್ತೆ 18.93 ಕಿ.ಮೀ ಇತರ ಇಲಾಖೆಯಿಂದ ಮರು ನಿರ್ಮಾಣ ಮಾಡಲಾಗಿರುತ್ತದೆ. ಯಾವುದೇ ರಸ್ತೆ ಮತು ನಿರ್ಮಾಣದ ಕಾಮಗಾರಿ ಬಾಕಿ ಇರುವುದಿಲ್ಲ.<br><br>2) **ಬೀದರ್ ನಗರದ ವಲಯ-2 ರಲ್ಲಿ ಒಳಚರಂಡಿ ಯೋಜನೆ:** ಸದರಿ ಕಾಮಗಾರಿಯ ನಿರ್ವಹಣೆಗಾಗಿ 27.37 ಕಿ.ಮೀ ರಸ್ತೆಯನ್ನು ಅಗೆಯಲಾಗಿದ್ದು, ಅದರಲ್ಲಿ 27.37 ಕಿ.ಮೀ ರಸ್ತೆಯನ್ನು ಮಂಡಳಿ ವತಿಯಿಂದ ಮರು ನಿರ್ಮಾಣ ಮಾಡಲಾಗಿರುತ್ತದೆ. ಯಾವುದೇ ರಸ್ತೆ ಮರು ನಿರ್ಮಾಣದ ಕಾಮಗಾರಿ ಬಾಕಿ ಇರುವುದಿಲ್ಲ.<br><br>3) **ಬೀದರ್ ನಗರದ ವಲಯ-1 ಮತ್ತು 2 ರಲ್ಲಿ ಬಿಟ್ಟು ಹೋದ ಪ್ರದೇಶದಲ್ಲಿ ಒಳಚರಂಡಿ ಯೋಜನೆ:** ಸದರಿ ಕಾಮಗಾರಿಯ ನಿರ್ವಹಣೆಗಾಗಿ 30.36 ಕಿ.ಮೀ ರಸ್ತೆಯನ್ನು ಅಗೆಯಲಾಗಿದ್ದು, ಅದರಲ್ಲಿ 20.86 ಕಿ.ಮೀ ರಸ್ತೆಯನ್ನು ಮಂಡಳಿ ವತಿಯಿಂದ ಹಾಗೂ ಉಳಿದ ರಸ್ತೆ 9.5 ಕಿ.ಮೀ ರಸ್ತೆ ಮರು ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಬೇಕಾಗಿದ್ದು, ವೇರಿಯೇಷನ್ ಪ್ರಸ್ತಾನೆಯು State High Power Steering Committee (SHPSC) ಯಲ್ಲಿ ಅನುಮೋದನೆಯಾಗಬೇಕಾಗಿರುತ್ತದೆ.<br><br>**ಕೆ.ಯು.ಐ.ಡಿ.ಎಫ್.ಸಿ ವತಿಯಿಂದ** ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಕತ್ತರಿಸಿದ ಅಗಲಕ್ಕೆ ಸೀಮಿತಗೊಳಿಸಿ ಸಿಸಿ ರಸ್ತೆಗಳನ್ನು ನಗರಸಭೆ ವತಿಯಿಂದ ಪುನರ್ನಿರ್ಮಾಣ ಮಾಡಲಾಗಿದೆ. ಎನ್.ಕೆ.ಯು.ಎಸ್.ಐ.ಪಿ ಯೋಜನೆಯಲ್ಲಿ ರಸ್ತೆ ಪುನರ್‌ನಿರ್ಮಾಣ ಮಾಡಲು ಅನುವು ಮಾಡಿದ್ದ ಮೊತ್ತವನ್ನು ಜಿಲ್ಲಾಧಿಕಾರಿಗಳಿಗೆ ನೀಡಿದ್ದು, ಸದರಿ ಮೊತ್ತಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಹ ನೀಡಿರುತ್ತಾರೆ. |
| ಇ) | ಈ ಎರಡು ಕಾಮಗಾರಿಗಳ ಅನುಷ್ಠಾನದಲ್ಲಿ ಎಷ್ಟು ಮನೆಗಳಿಗೆ ಸಂಪರ್ಕ ನೀಡಲಾಗಿದೆ ಮತ್ತು ಎಷ್ಟು ಮನೆಗಳಿಗೆ ಸಂಪರ್ಕ ನೀಡಬೇಕಾಗಿದೆ; (ವಿವರ ನೀಡುವುದು) | **ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ**<br><br>1) **ಬೀದರ್ ನಗರದ ವಲಯ-2 ರಲ್ಲಿ ಒಳಚರಂಡಿ ಯೋಜನೆ:-** ಸದರಿ ಯೋಜನೆಯಡಿಯ ಎಲ್ಲಾ 12167 ಸಂಖ್ಯೆಯ ಗೃಹ ಸಂಪರ್ಕ ನಿರ್ಮಾಣ ಮಾಡಲಾಗಿರುತ್ತದೆ, ಯಾವುದೇ ಬಾಕಿ ಇರುವುದಿಲ್ಲ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | 2) **ಬೀದರ್ ನಗರದ ವಲಯ-2 ರಲ್ಲಿ ಒಳಚರಂಡಿ ಯೋಜನೆ:**-ಸದರಿ ಯೋಜನೆಯಡಿಯ ಎಲ್ಲಾ 6060 ಸಂಖ್ಯೆಯ ಗೃಹ ಸಂಪರ್ಕ ನಿರ್ಮಾಣ ಮಾಡಲಾಗಿರುತ್ತದೆ. ಯಾವುದೇ ಬಾಕಿ ಇರುವುದಿಲ್ಲ.<br><br>3) **ಬೀದರ್ ನಗರದ ವಲಯ-1 ಮತ್ತು 3 ರಲ್ಲಿ ಬಿಟ್ಟು ಹೊದ ಪ್ರದೇಶದಲ್ಲಿ ಒಳಚರಂಡಿ ಯೋಜನೆ:** ಸದರಿ ಯೋಜನೆಯಡಿಯ ಎಲ್ಲಾ 2300 ಸಂಖ್ಯೆಯ ಗೃಹ ಸಂಪರ್ಕ ನಿರ್ಮಾಣ ಮಾಡಲಾಗಿರುತ್ತದೆ ಯಾವುದೇ ಬಾಕಿ ಇರುವುದಿಲ್ಲ.<br><br>**ಕೆ.ಯು.ಐ.ಡಿ.ಎಫ್.ಸಿ ವತಿಯಿಂದ** ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಬೀದರ್ ನಗರದಲ್ಲಿ ಯುಜಿಡಿ ಜಾಲ ಮತ್ತು ಮನೆಗಳಿಂದ ಸಂಪರ್ಕ ಪಡೆಯಲು ಬೇಕಾದ ಚೇಂಬರ್ ನಿರ್ಮಾಣ ಮಾಡಲು ಮಾತ್ರ ಅವಕಾಶವಿತ್ತು. ಮನೆ ಸಂಪರ್ಕವನ್ನು ಬಳಕೆದಾರರ ವೆಚ್ಚದಲ್ಲಿ ನಗರಸಭೆಯಿಂದ ಅನುಮತಿಪಡೆದುಕೊಂಡು ಗ್ರಾಹಕರ ಪಡೆಯಬೇಕಾಗಿದೆ.<br><br>ಯುಜಿಡಿ ಯೋಜನೆಯಿಂದ ಸುಮಾರು 6300 ಬಳಕೆದಾರರಿಗೆ ಅನುಕೂಲವಾಗುವುದು. ಇದುವರೆಗೂ 3520 ಒಳಚರಂಡಿ ಮನೆಸಂಪರ್ಕವನ್ನು ಬಳಕೆದಾರರು ಪಡೆದಿರುತ್ತಾರೆ.<br><br>24/7 ಕುಡಿಯುವ ನೀರು ಯೋಜನೆ ಕಾರ್ಯಚರಣೆ ಮತ್ತು ನಿರ್ವಹಣೆ ಹಂತದಲ್ಲಿದೆ. ಈ ಯೋಜನೆಯಿಂದ ಸುಮಾರು 30000 ಬಳಕೆದಾರರಿಗೆ ಅನುಕೂಲವಾಗುವುದು. ಇದುವರೆಗೂ 29531 ಸಂಖ್ಯೆ ಮನೆ ಸಂಪರ್ಕವನ್ನು ನೀಡಲಾಗಿದೆ. |
| ಈ) | ಸದರಿ ಕಾಮಗಾರಿಗಳ ಮುಕ್ತಾಯಕ್ಕೆ ಕಾಲ ಮಿತಿ ನೀಡಲಾಗಿದೆಯೇ; ನೀಡಿದಲ್ಲಿ ಕಾಲಮಿತಿ ವಿವರ ನೀಡುವುದು; | **ಕೆ.ಯು.ಡಬ್ಲ್ಯೂ.ಎಸ್&ಡಿ.ಬಿ ವತಿಯಿಂದ**<br><br>1) **ಬೀದರ್ ನಗರದ ವಲಯ-2 ರಲ್ಲಿ ಒಳಚರಂಡಿ ಯೋಜನೆ:** ಸದರಿ ಕಾಮಗಾರಿ ಮುಕ್ತಾಯಕ್ಕೆ ಡಿಸೆಂಬರ್-2019ರ ಕಾಲಮಿತಿ ನೀಡಲಾಗಿರುತ್ತದೆ. ಸದರಿ ಕಾಮಗಾರಿಯು ಡಿಸೆಂಬರ್-2019 ರಲ್ಲಿ ಮುಕ್ತಾಯಗೊಳಿಸಲಾಗಿರುತ್ತದೆ.<br><br>2) **ಬೀದರ್ ನಗರದ ವಲಯ-2 ರಲ್ಲಿ ಒಳಚರಂಡಿ ಯೋಜನೆ:** ಸದರಿ ಕಾಮಗಾರಿಯ ಮುಕ್ತಾಯಕ್ಕೆ ದಿನಾಂಕ: 13-03-2023 ರ ಕಾಲಮಿತಿ ನೀಡಲಾಗಿರುತ್ತದೆ.<br>ಸದರಿ ಕಾಮಗಾರಿಯು ದಿನಾಂಕ: 13-03-2023 ರಂದು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ.<br><br>3) **ಬೀದರ್ ನಗರದ ವಲಯ-1 ಮತ್ತು 3 ರಲ್ಲಿ ಬಿಟ್ಟು ಹೊದ ಪ್ರದೇಶದಲ್ಲಿ ಒಳಚರಂಡಿ ಯೋಜನೆ:-** ಸದರಿ ಕಾಮಗಾರಿಯನ್ನು ಮುಕ್ತಾಯಗೊಳಿಸಲು ದಿನಾಂಕ: 30-06-2022 ರ ಕಾಲಮಿತಿ ನೀಡಲಾಗಿರುತ್ತದೆ. ಅದರಂತೆ ಮುಕ್ತಾಯಗೊಳಿಸಿರುತ್ತಾರೆ. ಸದರಿ ಕಾಮಗಾರಿಯಡಿಯಲ್ಲಿ ಸುಮಾರು 9.5 ಕೀ.ಮೀ ರಸ್ತೆ ಮರು ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಬೇಕಾಗಿದ್ದು, ವೇರಿಯೇಷನ್ ಪ್ರಸ್ತಾನೆಯ State High Power Steering Committee (SHPSC) ಯಲ್ಲಿ ಅನುಮೋದನೆಯಾಗಬೇಕಾಗಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | **ಕೆ.ಯು.ಐ.ಡಿ.ಎಫ್.ಸಿ ವತಿಯಿಂದ** ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಬೀದರ್ ನಗರದಲ್ಲಿ ಯುಜಿಡಿ ಯೋಜನೆಯು ಪೂರ್ಣಗೊಂಡು ಮುಂದಿನ ನಿರ್ವಹಣೆಗಾಗಿ ನಗರ ಸಭೆಗೆ ಹಸ್ತಾಂತರಿಸಲಾಗಿದೆ. ಕುಡಿಯುವ ನೀರು ಸರಬರಾಜು ಕಾಮಗಾರಿ ದಿನಾಂಕ:31/08/2018 ರಂದು ಪೂರ್ಣಗೊಂಡಿರುತ್ತದೆ. ಕರಾರಿನ ನಿಯಮದಂತೆ ಗುತ್ತಿಗೆದಾರರು ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸುತ್ತಿರುತ್ತಾರೆ. |
| ಉ) | ಈ ಕಾಮಗಾರಿಗಳಿಗಾಗಿ ಎಷ್ಟು STP (Plant) ಗಳನ್ನು ನಿರ್ಮಾಣ ಮಾಡಲಾಗಿದೆ; ಅವುಗಳಲ್ಲಿ ಎಷ್ಟು Plant ಗಳು ಕಾರ್ಯನಿರ್ವಹಿಸುತ್ತಿವೆ; ಎಷ್ಟು Plant ಗಳು ಕಾರ್ಯಾರಂಭ ಮಾಡಬೇಕಾಗಿದೆ; ಕಾರ್ಯರಂಭ ಮಾಡದಿರುಲು ಕಾರಣವೇನು? | **ಕೆ.ಯು.ಡಬ್ಲ್ಯೂ.ಎಸ್&ಡಿ.ಬಿ ವತಿಯಿಂದ**<br>1) **ಬೀದರ್ ನಗರದ ವಲಯ-2 ರಲ್ಲಿ ಒಳಚರಂಡಿ ಯೋಜನೆ:-** ಸದರಿ ಯೋಜನೆಯಡಿಯಲ್ಲಿ ಒಂದು 17.26 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡಲಾಗಿರುತ್ತದೆ. ಸದರಿ Plant ಕಾರ್ಯನಿರ್ವಹಿಸುತ್ತಿದ.<br>2) **ಬೀದರ್ ನಗರದ ವಲಯ-3 ರಲ್ಲಿ ಒಳಚರಂಡಿ ಯೋಜನೆ:-** ಸದರಿ ಯೋಜನೆಯಡಿ ಒಂದು 17.26 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡಲಾಗಿರುತ್ತದೆ. ಸದರಿ Plant ನ್ನು ದಿನಾಂಕ: 13-03-2023 ರಂದು ಪ್ರಾಯೋಗಿಕವಾಗಿ ಚಾಲನಗೋಳಿಸಲಾಗಿದೆ.<br>**ಕೆ.ಯು.ಐ.ಡಿ.ಎಫ್.ಸಿ ವತಿಯಿಂದ** ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಬೀದರ್ ನಗರದಲ್ಲಿ ಎಫ್.ಎ.ಎಲ್ ಮಾದರಿಯ 17.26 ಎಂಎಲ್‌ಡಿ ಸಾಮರ್ಥ್ಯದ ಒಂದು ತ್ಯಾಜ್ಯ ನೀರು ಸಂಸ್ಕರಣ ಘಟಕ ನಿರ್ಮಾಣ ಮಾಡಲಾಗಿದೆ. ಸದರಿ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು ಸುಸ್ಥಿತಿಯಲ್ಲಿ ಚಾಲನೆಯಲ್ಲಿರುವಂತೆ ನಗರಸಭೆಗೆ ಮುಂದಿನ ನಿರ್ವಹಣೆಗೆ ದಿನಾಂಕ:07/12/2021 ರಂದು ಹಸ್ತಾಂತರಿಸಲಾಗಿದೆ. |

ಕಡತ ಸಂಖ್ಯೆ: ನಅಇ 89 ಪಿ.ಆರ್.ಜೆ 2023

13/07/2023

( ಬಿ. ಎಸ್. ಸುರೇಶ )

ನಗರಾಭಿವೃದ್ಧಿ ಮತ್ತು ನಗರ ಯೋಜನ ಸಚಿವರು.